ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನಿಯಮ 32ರಡಿ ಅಧಿಕಾರಿ/ನೌಕರರ ಸಕ್ರಮಾತಿ ಬಗ್ಗೆ

ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) :-

789 (727) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಾಣಿಜ್ಯ ತೆರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಎ. ಬಿ. ಮತ್ತು ಸಿ. ವೃಂದದ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; (ಹುದ್ದೆವಾರು ವಿವರ ನೀಡುವುದು)

(ಆ) ಈ ಹುದ್ದೆಗಳಿಗೆ ನೇರ ನೇಮಕಾತಿ ಮತ್ತು ಬಡ್ತಿ ಮೂಲಕ ನಿಗದಿಪಡಿಸಿರುವ ಅನುಪಾತವೆಷ್ಟು ;ದಿನಾಂಕ: 31-12-2019 ರಿಂದ ಯಾವ್ಯಾವ ವೃಂದಗಳಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಇವೆ ;

(ಇ) 2009 ರ ನಂತರ ದ್ವಿತೀಯ ದರ್ಜೆ ಸಹಾಯಕರಿಂದ ಪ್ರಥಮ ದರ್ಜೆ ಸಹಾಯಕರಾಗಿ ನಿಯಮ 32ರಡಿಯಲ್ಲಿ ಬಡ್ತಿ ಪಡೆದಿರುವ ನೌಕರರೆಷ್ಟು ; ಯಾವ ದಿನಾಂಕದಿಂದ ಬಡ್ತಿ ನೀಡಲಾಗಿದೆ ; ಇವರುಗಳಲ್ಲಿ ಎಷ್ಟು ಜನರಿಗೆ ಸಕ್ರಮಾತಿ ಮಾಡಲಾಗಿದೆ ; ಈವರೆಗೂ ಸಕ್ರಮಾತಿ ಮಾಡದಿರಲು ಕಾರಣಗಳೇನು ; ಯಾವ ನಿರ್ದಿಷ್ಟ ದಿನಾಂಕದಂದು ಸಕ್ರಮಾತಿಗೊಳಿಸಲಾಗುವುದು ; ದ್ವಿತೀಯ ದರ್ಜೆ ಸಹಾಯಕರ ಜೇಷ್ಠತಾ ಪಟ್ಟಿಯನ್ನು ಒದಗಿಸುವುದು ;

(ಈ) ಮಂಜೂರಾದ ವಾಣಿಜ್ಯ ತೆರಿಗೆ ಪರಿವೀಕ್ಷಕ ಹುದ್ದೆಗಳಿಗಿಂತ ಹೆಚ್ಚುವರಿ ಪರಿವೀಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮಾಡಿಕೊಳ್ಳುತ್ತಿರುವುದು ನಿಜವೇ ; ಇದ್ದಲ್ಲಿ, ಎಷ್ಟು ಹೆಚ್ಚುವರಿ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ ; ಇದಕ್ಕೆ ಕಾರಣಗಳೇನು ;

(ಉ) ಹೆಚ್ಚುವರಿ ಪರಿವೀಕ್ಷಕ ಹುದ್ದೆಗಳಲ್ಲಿ ಕಿರಿಯ ವಯೋಮಿತಿಯ ಅಭ್ಯರ್ಥಿಗಳು ನೇರ ನೇಮಕವಾಗುವುದರಿಂದ ವಯಸ್ಸಿನಲ್ಲಿ ಹಿರಿಯರಾಗಿರುವ ಮತ್ತು ನಿಯಮ 32ರಡಿ ಬಡ್ತಿ ಪಡೆದಿರುವ ಪರಿವೀಕ್ಷಕರನ್ನು ಸಕ್ರಮಾತಿ ಮಾಡದಿದ್ದರೆ, ಇವರಿಗೆ ಮುಂದಿನ ಹುದ್ದೆಗಳ ಬಡ್ತಿಗಳಲ್ಲಿ ಅನ್ಯಾಯವಾಗುವುದಿಲ್ಲವೇ ; ಈ ಅನ್ಯಾಯವನ್ನು ಸರಿಪಡಿಸಲು ಕೈಗೊಳ್ಳುವ ಕ್ರಮಗಳೇನು ? (ವಿವರ ನೀಡುವುದು)